# II. ಏಕದಳ ಧಾನ್ಯದ ಬೆಳೆಗಳು

ರಾಜ್ಯದಲ್ಲಿ ಮುಂಗಾರು, ಹಿಂಗಾರು ಮತ್ತು ಬೇಸಿಗೆ ಕಾಲಗಳಲ್ಲಿ ಪ್ರಮುಖವಾಗಿ ಬೆಳೆಯುತ್ತಿರುವ ಏಕದಳ ಧಾನ್ಯ ಬೆಳೆಗಳ ಒಟ್ಟು ವಿಸ್ತೀರ್ಣ, ಉತ್ಪಾದನೆ ಹಾಗೂ ಉತ್ಪಾದಕತೆಯ ಅಂಕಿ ಅಂಶಗಳು.

| ಕ್ರ. ಸಂ | ಬೆಳೆಗಳು | ಒಟ್ಟು ವಿಸ್ತೀರ್ಣ (ಲಕ್ಷ ಎಕರೆ) | ಒಟ್ಟು ಉತ್ಪಾದನೆ (ಲಕ್ಷ ಟನ್) | ಉತ್ಪಾದಕತೆ (ಕ್ವಿ./ಎ.) |
|---|---|---|---|---|
| 1. | ಭತ್ತ | 27.25 | 29.67 | 11.02 (ಅಕ್ಕಿ) |
| 2. | ರಾಗಿ | 7.08 | 12.98 | 7.72 |
| 3. | ಶಕ್ತಿಮಾನ್ (ಸಂಕರಣ) ಜೋಳ | 10.47 | 11.74 | 4.72 |
| 4. | ಶಕ್ತಿಮಾನ್ (ಸಂಕರಣ) ಮುಸುಕಿನ ಜೋಳ | 13.37 | 42.14 | 13.27 |
| 5. | ಗೋಧಿ | 4.12 | 1.71 | 4.07 |
| 6. | ಶಕ್ತಿಮಾನ್ (ಸಂಕರಣ) ಸಜ್ಜೆ | 6.05 | 2.55 | 4.21 |
| 7. | ಇತರೆ ಸಿರಿಧಾನ್ಯಗಳು | 2.10 | 0.7 | 1.33 |

## 4. ಭತ್ತ

ಭತ್ತ ನಮ್ಮ ರಾಜ್ಯದ ಪ್ರಮುಖ ಆಹಾರ ಬೆಳೆ. ಇದನ್ನು ನೀರಾವರಿ, ಅಚ್ಚುಕಟ್ಟು ಪ್ರದೇಶಗಳಲ್ಲಿ ಕೆರೆ, ಬಾವಿ ಹಾಗೂ ಮಳೆ ಆಶ್ರಯ ಪ್ರದೇಶಗಳಲ್ಲಿ ಬೆಳೆಯಲಾಗುತ್ತಿದೆ. ರಾಜ್ಯದ ವಿವಿಧ ಜಿಲ್ಲೆಗಳಿಗೆ ಬಿತ್ತನೆಯ ಕಾಲ, ನೀರಿನ ಲಭ್ಯತೆ, ಕೀಟ ಹಾಗೂ ರೋಗದ ತೀವ್ರತೆ ಮತ್ತು ಮಣ್ಣಿನ ಗುಣಲಕ್ಷಣಗಳನ್ನು ಗಮನದಲ್ಲಿಟ್ಟುಕೊಂಡು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಅಧಿಕ ಇಳುವರಿ ನೀಡುವ ಅನೇಕ ತಳಿಗಳು ಹಾಗೂ ಸಂಕರಣ ತಳಿಗಳನ್ನು ಅಭಿವೃದ್ಧಿಗೊಳಿಸಿ ಬಿಡುಗಡೆ ಮಾಡಲಾಗಿದೆ.

**ಸೂಚನೆ:**

**ನಾಟಿ ಅಂತರ**

1. ದೀರ್ಘಾವಧಿ ಮತ್ತು ಮಧ್ಯಮಾವಧಿ ತಳಿಗಳನ್ನು 8 ಅಂಗುಲ ಸಾಲಿನಲ್ಲಿ ಗುಣಿಯಿಂದ ಗುಣಿಗೆ 4 ಅಂಗುಲ ಅಂತರದಲ್ಲಿ ನಾಟಿ ಮಾಡುವುದು (ಪ್ರತಿ 10 ಚದರ ಅಡಿಗೆ 45 ರಿಂದ 46 ಗುಣಿಗಳು), ಅಲ್ಪಾವಧಿ ತಳಿಗಳನ್ನು 6 ಅಂಗುಲ ಸಾಲಿನಲ್ಲಿ ಗುಣಿಯಿಂದ ಗುಣಿಗೆ 4 ಅಂಗುಲ ಅಂತರದಲ್ಲಿ ನಾಟಿ ಮಾಡುವುದು (ಪ್ರತಿ 10 ಚದರ ಅಡಿಗೆ 58 ರಿಂದ 59 ಗುಣಿಗಳು) ಹಾಗೂ ಸಂಕರಣ ತಳಿಗಳನ್ನು 6 ಅಂಗುಲ ಸಾಲಿನಲ್ಲಿ ಗುಣಿಯಿಂದ ಗುಣಿಗೆ 6 ಅಂಗುಲ ಅಂತರದಲ್ಲಿ ನಾಟಿ ಮಾಡುವುದು (ಪ್ರತಿ 10 ಚದರ ಅಡಿಗೆ 40 ಗುಣಿಗಳು),
2. ಸಂಕರಣ ಭತ್ತದ ತಳಿಗಳನ್ನು ಬೆಳೆಯುವಾಗ ಪ್ರತಿ ಸಲವೂ ಹೊಸ ಬಿತ್ತನೆ ಬೀಜವನ್ನು ಉಪಯೋಗಿಸುವುದು ಹಾಗೂ ಸಂಕರಣ ಭತ್ತದ ಬೆಳೆಯನ್ನು ಬೀಜಕ್ಕಾಗಿ ಉಪಯೋಗಿಸಬಾರದು.
3. ಸಂಕರಣ ಭತ್ತದ ತಳಿಗಳನ್ನು ನಾಟಿ ಮಾಡುವಾಗ ಪ್ರತಿ ಗುಣಿಗೆ ಒಂದೇ ಪೈರನ್ನು ನಾಟಿ ಮಾಡುವುದು.

**ಬೇಸಿಗೆ ಬೆಳೆ :**

1. ಬೇಸಿಗೆಯಲ್ಲಿ ಜನವರಿ 3 ಮತ್ತು 4ನೇ ವಾರ ಸಸಿಮಡಿ ತಯಾರಿಸುವುದು ಹಾಗೂ ಫೆಬ್ರವರಿ 2 ಮತ್ತು 3 ನೇ ವಾರ ನಾಟಿ ಮಾಡಲು ಸೂಕ್ತ ಸಮಯ. ನೀರಿನ ಲಭ್ಯತೆಗೆ ಅನುಗುಣವಾಗಿ ಮೇಲಿನ ಯಾವುದೇ